(SRI M. V. KRISHNAPPA)

4 Kariyappa *bin* Kariyappa.
5 Nadlukeri Siddanna.
6 Puttasiddappa.
7 Byrappa.
8 Kattappa.
9 Dasanna.
10 Siddanna.
11 Thimmanna.
12 Kariyanna.

(c) Action is being taken on Takararthaktha.

---

2 P.M.

Parole granted to Sri Gangadhara Namoshi, M.L.A.

(*Announcement*)

Mr. SPEAKER.—I have to make an announcement. I have received a copy of the Order of the Government intimating that the period of parole granted to Sri Gangadhar Namoshi, Member, Legislative Assembly, has been further extended by one week from 13th March 1966 to 19th March 1966.

MYSORE APPROPRIATION (No. 3) BILL, 1966

(*Introduction*)

Sri S. NIJALINGAPPA (Chief Minister).—I beg to introduce the Mysore Appropriation (No. 3) Bill, 1966.

Mr. SPEAKER.—The Mysore Appropriation (No. 3) Bill, 1966, is introduced.‡

MYSORE APPROPRIATION (No. 3) Bill, 1966.

Motion to consider

Sri S. NIJALINGAPPA.—I beg to move:

"That the Mysore Appropriation (No. 3) Bill, 1966, be taken into consideration."

‡ Introduced upon the recommendation of the Governor of Mysore.

Mr. SPEAKER.—Recommendation has been received from the Governor for that purpose. I am making that announcement. Motion moved :

"That the Mysore Appropriation (No. 3) Bill, 1966, be taken into consideration."

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ನಭಾಪತಿಯವರೆ, ಈ 3ನೇ ಅಪ್ರೋಪ್ರಿಯೇಷನ್ ಬಿಲ್‌ಗೆ ಸಂಬಂಧಪಟ್ಟ ಡಿಮ್ಯಾಂಡ್‌ಗಳಿಗೆ ನೆನ್ನೆತಾನೆ ಸಭೆಯ ಮುಂಜೂರಾತಿ ಪಡೆದು ಸುಮಾರು 58 ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಸಭೆಯ ಅನುಮತಿ ಕೇಳಿ ಈ ಮಸೂದೆಯನ್ನು ಇಟ್ಟಿದ್ದೀರಿ. ಇಷ್ಟು ಅಪಾರ ಹಣವನ್ನು ಈ 3ನೇ ಅಪ್ರೋಪ್ರಿಯೇಷನ್ ಬಿಲ್‌ನಲ್ಲಿ ಕೇಳುತ್ತಿರುವುದು ಬಹಳ ಆಶ್ಚರ್ಯಕರ. ಈ ಸಭೆಯ ಮುಂದೆ ಬಿಲ್ಲನ್ನು ಚರ್ಚೆ ಮಾಡ ತಕ್ಕಂಥ ಕಾಲದಲ್ಲಿ, ಸರ್ಕಾರದವರು ಹಣಕಾಸಿನ ಖರ್ಚಿನ ಬಗ್ಗೆ ಹತೋಟಿ ಇಲ್ಲದೆ ಖರ್ಚು ಮಾಡು ತ್ತಿದ್ದಾರೆ ಎಂಬ ಟೀಕೆ ಬಂತು. ಈ ಬಗ್ಗೆ ತಾವು ಸೂಕ್ತವಾದ ಉತ್ತರ ಕೊಟ್ಟು ಈ ಮಸೂದೆಯನ್ನು ಈ ಸಭೆಯ ಮುಂದೆ ತರುತ್ತಾರೆಂದು ಭಾವಿಸಿದ್ದೆವು. ಈ ಸಭೆಯಲ್ಲಿ ಮಾಡಿದಂತ ಅಮೂಲ್ಯ ಸಲಹೆಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು, ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ತರುವ ಮುನ್ನ ಮಾನ್ಯ ಹಣಕಾಸಿನ ಸಚಿವರು ಉಳಿತಾಯ ಮಾಡುವ ಬಗ್ಗೆ ನಾನಾ ಯೋಜನೆಗಳನ್ನು ತಂದು ಸರಿಮಾಡಿ, ಈ ಸಭೆಯ ಮುಂದೆ ತರುತ್ತಾರೆ ಎಂದು ತಿಳಿದುಕೊಂಡಿದ್ದೆವು. ಈ ಸಭೆಯಲ್ಲ ಮಾಡಿದಂತಹ ಚರ್ಚೆ ಅವರ ಮೇಲೆ ಯಾವ ಪರಿಣಾಮವನ್ನು ಉಂಟುಮಾಡಿಲ್ಲ. ಮೊದಲು ಏನು ಸ್ಥಿತಿ ಇತ್ತೋ ಅದನ್ನು ಚಾಚೂ ತಪ್ಪದೆ, ಅದೇ ರೀತಿ ತಂದಿಟ್ಟಿದ್ದಾರೆ. ಈ ಬಗ್ಗೆ ಬಹಳ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ನಾನು ಈ ಮಸೂದೆಯನ್ನು ವಿರೋಧ ಮಾಡುತ್ತೇನೆ.

†ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಮೈಸೂರು ರಾಜ್ಯದ ಹಣಕಾಸಿಗೆ ಸಂಬಂಧ ಪಟ್ಟಂತೆ 58 ಕೋಟಿ 80 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಒಪ್ಪಿಗೆ ಪಡೆಯಲು ಸಭೆಯ ಮುಂದೆ ಇಟ್ಟಿದ್ದಾರೆ. ನಾನಾದರೂ ಹೇಳುತ್ತಿದ್ದೇನೆ. ದೇಶದ ಮುಂದೆ ಇರತಕ್ಕಂಥ ಅಭಾವ ಪೀಡಿತ ಪ್ರದೇಶಗಳಲ್ಲಿ ಜನಗಳು ಬಹಳ ತೊಂದರೆಯಲ್ಲಿದ್ದಾರೆ. ಆದ್ದರಿಂದ ಕೆಲಸ ಕಾರ್ಯಗಳನ್ನು ತೀವ್ರಗತಿಯಿಂದ ಪ್ರಾರಂಭಿಸಬೇಕೆಂದು ಸಲಹೆ ಮಾಡುತ್ತಿದ್ದೇನೆ. ನಾನು ತಿಳಿದುಕೊಂಡ ಹಾಗೆ ಈ ಬರಗಾಲ ಪೀಡಿತ ಪ್ರದೇಶಗಳಲ್ಲಿ ನೀರಾವರಿ ಬಾವಿಗಳನ್ನು ತೆಗೆಸುವುದು, ಕೆರೆ ಕುಂಟೆಗಳನ್ನು ಮಾಡಿಸುವುದು ಸೂಕ್ತವಾಗಿದೆ. ಸರ್ಕಾರದವರು ರಸ್ತೆಗಳ ರಿಪೇರಿ ಕೆಲಸವನ್ನು ಕೈಬಿಟ್ಟಿದ್ದಾರೆ. ಈ ರಸ್ತೆಗಳ ಕೆಲಸವನ್ನು ಪ್ರಾರಂಭಿಸಿದರೆ ಜನಗಳಿಗೆ ಕೂಲಿಯನ್ನು ಒದಗಿಸಿದ ಹಾಗೆ ಆಗುತ್ತದೆ. ಜನಗಳಿಗೆ ಪರಿಹಾರ ಒದಗಿಸಿಕೊಡಬೇಕು. ಎಲ್ಲಾ ರೀತಿಯ ಕಾಮಗಾರಿಗಳನ್ನೂ ಅದಷ್ಟುಮಟ್ಟಿಗೆ ಜಾಗ್ರತೆ ತೆಗೆದುಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ.

Sri V. S. PATIL (Belgaum I).—I want to make my point clear. The present Budget that we are discussing will come into effect from 1st April. But the figures in the Budget are based upon the revised estimates of the current year and actuals of the year before. So whether these amounts which are to be spent before 31st April 1966 have been included in the revised estimates of the current year, is my question? If this is an excess amount, from where are we to find these amounts ?

Mr. SPEAKER.—Whatever that is mentioned there is not found in the Supplementary. The supplementary estimates are uncovered by any previous budget or whatever it is.

Sri V. S. PATIL.—That is the reason why I have raised this point. According to the Finance Minister's statement on the floor of this House, the only amount that should be saved is about a crore or two. That is the sum total of his statement before this House.

We are now discussing the Budget for the next year from 1st April 1966 and the Government have given us the revised figures for the current

(SRI V. S. PATIL)

year, and on the basis of the revised figures of the current year, the next years's budget is framed. Now this is an amount of Rs. 58 crores and more that is to be spent; whether this figures is included in the revised estimates of the Budget which has been presented to us; and if not, from where this amount is to be found and credited to the Government of India for loans? I would like to know from the Government as to whether this Rs. 58,80,71,995 has been taken into account at the time of framing the budget for the next year that is being discussed.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ನನ್ನ ಭಾಷಣದಲ್ಲಿ ಈ ಡಿಮ್ಯಾಂಡ್‌ಗಳ ಮೇಲೆ ಮಾತನಾಡುತ್ತಾ ಕೆಲವು ಸಂಶಯಗಳನ್ನು ವ್ಯಕ್ತಪಡಿಸಿದೆ. ಸಂಶಯಾತ್ಮಾ ವಿನಶ್ಯತಿ ಎಂದು ಇದೆಯೆಲ್ಲಾ, ಅದರ ಪ್ರಕಾರ ಒಂದು ಸಂಶಯವಿದೆ. ಅದಕ್ಕೆ ವಿವರಣೆ ಕೊಟ್ಟಿಲ್ಲ, ತಾವು ವಿವರಣೆ ಕೊಡಬೇಕಾಗಿದೆ. ಈಗ ಕೇಂದ್ರ ಸರ್ಕಾರದಿಂದ 34.33 ಕೋಟಿ ರೂಪಾಯಿಗಳು ಏನು ಅಲ್ಪಾವಧಿ ಸಾಲ ಪಡೆಯುವ ಬಗ್ಗೆ ತಾವು ಈಗಾಗಲೇ ವ್ಯವಹಾರ ಮಾಡಿಕೊಂಡಿದ್ದೀರಿ. ಈಗ ಸಾಲವಾಗಿ 34 ಕೋಟಿ ರೂಪಾಯಿಗಳನ್ನು ಕೇಂದ್ರಸರ್ಕಾರದವರು ಕೊಡುವುದಕ್ಕೆ ಒಪ್ಪಿ ಕೊಂಡಿದ್ದಾರೆ. ಇ ದ ಕ್ಕೆ ಬಡ್ಡಿಯನ್ನು ಕೊಡಬೇಕಾಗುತ್ತದೆ. ಅಂದರೆ ಎ ಲ್ಲಾ ಸೇರಿಸಿ 42 ಕೋಟಿ ರೂಪಾಯಿಗಳನ್ನು ಪೂರ್ತಿ ಕೊಡಬೇಕಾಗುತ್ತದೆ. ಸದ್ಯಕ್ಕೆ 25 ಕೋಟಿ ರೂಪಾಯಿಗಳು ಆದರೆ ಸಾಕು ಎಂದು ಹೇಳಿದ್ದೀರಿ. ಮುಂದಿನ ಬಡ್ಜೆಟ್ ಹೇಗೆ ಸರಿತೂಗಿಸುತ್ತೀರಿ ಎಂದು ತಿಳಿಯ ಬೇಕಾಗಿದೆ. ಇದರ ಬಗ್ಗೆ ಸಂಶಯ ಬಂದಿದೆ, ಅದರ ಬಗ್ಗೆ ಒಂದು ವಿವರಣೆ ಕೊಡಬೇಕಾಗಿದೆ.

Sri V. S. PATIL.—There may a surplus of a crore or two in the next year's Budget according to him. But if we are to pay Rs. 58.68 crores, from where the Finance Minister is going to get this money?

Mr. SPEAKER.—Let the idea be very clear that the amount in the Budget which is being discussed is going to be appropriated after the Appropriation Bill is passed and that it is going to operate from 1st April 1966, and not earlier than that. To think that Supplementary Demands are included in the revised estimates or they form part and parcel of the revised estimates is besides the point. If they are so covered in the revised estimates, then why should they come up here? These are new schemes, not covered by the Budget passed till now. This is Appropriation Bill (No. 3) of the current year and not of the year to come. There is no inconsistency. How the funds are going to be found is a different matter. It does not come under AppropriationBill.

ಶ್ರೀ ಎಸ್. ಗೋಪಾಲಗೌಡ.—ನನ್ನ ಪಾಯಿಂಟ್ ಇಷ್ಟೇ. ರಿವೈಸ್ಡ್ ಎಸ್ಟಿಮೇಟ್ಸ್ 1965-66ನೆಯ ಸಾಲಿನ ಬಡ್ಜೆಟ್ ಕಾಲಂನಲ್ಲಿ ಇದೆ. ಈ ಡಿಮ್ಯಾಂಡ್‌ಗಳ ಬಗ್ಗೆ ಕೊಟ್ಟಿರುವ ಹಣ ಅದರಲ್ಲಿ ಸೇರಿಸಲ್ಪಟ್ಟಿದೆಯೇ?

Mr. SPEAKER.—The Members can themselves verify that and their asking for assistance in this matter does not arise.

Sri V. S. PATIL.—We have sanctioned Rs. 58 crores and odd. I should like to know from what source the Government is going to get this amount because in the last year's budget there is no surplus at all and in the current year's budget also there is no surplus. From where the Government is going to get this amount for disbursement or is it a figures to be shown to the Legislature?

Sri S. NIJALINGAPPA.—It has been made quite clear how Rs. 10 crores of our securities have been disposed of and how we are going to borrow and get help from the Central Government.

Sri K. S. SURYANARAYANA RAO (Mysore City).—Our budget proposals are based on the opening and closing balances.

Mr. SPEAKER.—Therefore, does it mean that no Appropriation Bill can be passed ?

Sri K. S. SURYANARAYANA RAO.—I do not say that. Unless there is money in the closing balance of the next year, how are you going to pay this ?

Mr. SPEAKER.—Are we going to disburse money to anybody here ? I am putting the Bill to the vote of the House. On an Appropriation Bill, no debate is allowed, but as a matter of indulgence I have allowed even this much of discussion. The question is :

" That the Mysore Appropriation (No. 3) Bill, 1966, be taken into consideration."

The motion was adopted

CLAUSE 2 AND 3

Mr. SPEAKER.—The question is :

" That clauses 2 and 3 stand part of the Bill."

The motion was adopted.

Clauses 2 and 3 were added to the Bill.

SCHEDULE.

Mr. SPEAKER.—The question is :

" That the schedule stand part of the Bill."

The motion was adopted.

The schedule was added to the Bill.

CLAUSE 1 THE TITLE AND THE PREAMBLE.

Mr. SPEAKER.—The question is :

" That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri S. NIJALINGAPPA.—I beg to move :

"That the Mysore Appropriation (No. 3) Bill, 1966, be passed."

Mr. SPEAKER.—The question is :

"That the Mysore Appropriation (No. 3) Bill, 1966, be passed."

The motion was adopted .

BUDGET ESTIMATES FOR 1966-67—DEMANDS FOR GRANTS.

Demand No. 10, 29, 30, 45, 46, 27, 9 and 11.

(Debate Continued)

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ಸಾಮಾನ್ಯ ಆಡಳಿತ ದಿನೇ ದಿನೇ ನಿರ್ವೀರ್ಯವಾಗಿ ಕೃಪವಾಗುತ್ತಾ ಇದೆ. ಇದು ಮೈಸೂರಿನ ಸಾಮಾನ್ಯ ಜನತೆಯ ಅಶೋತ್ತರ ಈಡೇರಿಸುವುದಕ್ಕೆ ಸಹಾಯಕವಾಗಿಲ್ಲ ಎಂದು ಹೇಳುತ್ತೇನೆ. ವಿಧಾನ ಸೌಧದ ಸಾಮಾನ್ಯ ಆಡಳಿತ ಎಷ್ಟರಮಟ್ಟಿಗೆ ನಡೆಯುತ್ತದೆ ಎಂದು ಹಣಕಾಸಿನ ಸಚಿವರು ಮಾರ್ಚ್ 7ನೆಯ ತಾರೀಖು ಒಂದು ಕಡೆ ಮಾತನಾಡಿದುದನ್ನು ನಭೆಗೆ ಹೇಳಿದರೆ ಮೈಸೂರು ಸಾಮಾನ್ಯ ಆಡಳಿತ ಎಷ್ಟರಮಟ್ಟಿಗೆ ನಡೆಯುತ್ತಿದೆ ಎಂದು ಎಲ್ಲರಿಗೂ ವೇದ್ಯವಾಗುತ್ತದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಹಣಕಾಸಿನ ಸಚಿವರು ಹೀಗೆ ಹೇಳಿದ್ದಾರೆ.

> "Mysore Government Secretariat is most inefficient. In the Secretariat anything could be done by influence. For promotion, only influence was counted and not effieiency. Underserving and inefficient people were promoted..."

Sri K. PUTTASWAMY (Minister for Co-operation and Housing).—I rise to a point of order. No Hon'ble Member can be permitted to quote from a Newspaper.

Sri C. J. MUCKANNAPPA.—There is an observation by the Hon'ble Speaker that if we believe a statement to be true, then that statement can be quoted. Further, the Hon'ble Speaker has ruled that if an Hon'ble Member quotes information from any newspaper, he must take the full responsibility. That is why I am taking this responsibility. The Hon'ble Minister for Finance made this categorical statement when he addressed the Accountants Association of the Controller's Office at a function held at the Secretariat Club :

> "For promotions only influence was counted and not efficiency and undeserving and inefficient people were promoted and efficient people were kept in the same position because of want of influence. Unless the vicious influence was rooted down, the efficiency of the Government Secretariat would not improve... Many States had described Mysore Government Secretariat as inefficient."

ಮೈಸೂರು ಸಂಸ್ಥಾನದ ಹಣಕಾಸಿನ ಸಚಿವರು ಮೈಸೂರು ವಿಧಾನ ಸೌಧದಲ್ಲಿ ಮೈಸೂರು ಸರ್ಕಾರದ ಸಾಮಾನ್ಯ ಆಡಳಿತ ಎಷ್ಟರಮಟ್ಟಿಗೆ ನಡೆಯುತ್ತಾ ಇದೆ ಎನ್ನತಕ್ಕಂಥಾದಕ್ಕೆ ಒಂದು